ರೈತರ ನೀರಿನ ಬವಣೆಯನ್ನು 1992ನೇ ಜೂನ್ ತಿಂಗಳ ಒಳಗಾಗಿ ಪರಿಹರಿಸಬೇಕೆಂದು ತಮ್ಮ ಮೂಲಕ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರನ್ನು ಒತ್ತಾಯಮಾಡುತ್ತೇನೆ.

ಶ್ರೀ ಮಲ್ಲಾರಿಗೌಡ. ಎನ್. ಪಾಟೀಲ್ (ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು):-ಮಾನ್ಯ ಅಧ್ಯಕ್ಷರೇ, ಚಟ್ಟಂಗೆರೆ ಸುರಂಗವು ಹೇಮಾವತಿ ಎಡದಂಡೆ ನಾಲೆಯ 152ನೇ ಕಿ. ಮೀ. ನಲ್ಲಿದೆ. ಈ ಸುರಂಗದ ನಿರ್ಮಾಣ ಕೆಲಸವನ್ನು ಟೆಂಡರ್ ಆಧಾರದ ಮೇಲೆ ಮಾರ್ಚ್ 85ರಲ್ಲಿ ವಹಿಸಿಕೊಡಲಾಯಿತು. ಕೆಲಸವನ್ನು ಏಪ್ರಿಲ್ 85ರಲ್ಲಿ ಆರಂಭಿಸಲಾಯಿತು. ಸುರಂಗದ ಅಗೆತದ ಕೆಲಸವು ಪೂರ್ಣ ಗೊಳ್ಳುವ ಹಂತದಲ್ಲಿದ್ದಾಗ ಕಾಮಗಾರಿಯಲ್ಲಿ ಕೆಲವು ಲೋಪದೋಷಗಳು ಕಂಡು ಬಂದದ್ದರಿಂದ ಸೆಪ್ಟೆಂಬರ್ 88ರಲ್ಲಿ ಲೋಕಾಯುಕ್ತರವರ ತನಿಖೆಗೆ ವಹಿಸಲಾಯಿತು. ಸೆಪ್ಟೆಂಬರ್ 88ರವರೆಗೆ ಆದ ವೆಚ್ಚ ರೂ. 2.48 ಕೋಟಿ ತನಿಖೆಯು ಪ್ರಗತಿಯಲ್ಲಿದ್ದು ವರದಿ ನಿರೀಕ್ಷಿಸಲಾಗಿದೆ. ಸುರಂಗದ ಲೈನಿಂಗ್ ಕೆಲಸ ಉಳಿದಿದ್ದು ಇದನ್ನು ಪೂರ್ಣಗೊಳಿಸಿದಲ್ಲಿ ಮುಂದಿನ ಭಾಗದ ಸುಮಾರು 30,000 ಎಕರೆ ಪ್ರದೇಶಕ್ಕೆ ನೀರೊದಗಿಸಲು ಸಾಧ್ಯವಾಗುತ್ತದೆ. ಈ ಅಂಶವನ್ನು ಮನಗಂಡು ಸರ್ಕಾರವು ಲೋಕಾಯುಕ್ತರವರ ತನಿಖೆಯಿಂದ ಉದ್ಭವಿಸಿದ ಕೆಲವು ಸಮಸ್ಯೆಗಳ ಬಗ್ಗೆ ನಿರ್ಧಾರ ತೆಗೆದುಕೊಂಡು ಸುರಂಗದ ಕೆಲಸಗಳನ್ನು ಮುಂದುವರೆಸಿ ಪೂರ್ಣಗೊಳಿಸಲು ಆದೇಶ ನೀಡಿದೆ. ಸದಸ್ಯರು ಪ್ರಸ್ತಾಪಿಸಿರುವ ಮಂಡ್ಯ ಜಿಲ್ಲೆಯ ಬಸರಾಳು ಮತ್ತು ದುದ್ದ ಹೋಬಳಿಯ ಭಾಗಗಳಿಗೆ 1993-94ರಲ್ಲಿ ನೀರಾವರಿ ಸೌಲಭ್ಯ ಕಲ್ಪಿಸಲು ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

(7)ಕರ್ನಾಟಕತ ವಿದ್ಯುಚ್ಛಕ್ತಿ ಮಂಡಳಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಕಲಾ ಪದವೀಧರರಿಗೆ ಸೌಲಭ್ಯವನ್ನು ಒದಗಿಸುವ ಬಗ್ಗೆ.

ಶ್ರೀ ಬಾಬುರಾವ್ ಚವಾಣ್:-ಕರ್ನಾಟಕ ವಿದ್ಯುಚ್ಛಕ್ತಿ ಮಂಡಲಿಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ವಿಜ್ಞಾನ ಮತ್ತು ವಾಣಿಜ್ಯ ಪದವೀಧರರ ಸಹಾಯಕ ಉಗ್ರಾಣಿಕರಿಗೆ ಮಂಡಲಿಯ ಆದೇಶ ಸಂಖ್ಯೆ ಕವಿಮ:ಡಬ್ಲ್ಯೂ:ಎಲ್‌ಪಿಸಿ: 18: 74-75 ದಿನಾಂಕ 27-7-1976ರ ಮೇರೆಗೆ ಪ್ರಸ್ತುತ ನಾಲ್ಕು ಹೆಚ್ಚುವರಿ ವೇತನ ಮುಂಬಡ್ತಿಯನ್ನು ನೀಡಲಾಗುತ್ತಿತ್ತು ಈ ಸೌಲಭ್ಯವನ್ನು ಕಲಾ ಪದವೀಧರರಿಗೆ ಕೊಡಲಾಗುತ್ತಿಲ್ಲ ಏಕೆ? ಮಂಡಲಿಯು ನೇಮಕಾತಿ ನಿಯಮಾವಳಿಗಳನ್ನು ಸೃಷ್ಟಿಸುವಾಗ (ಸಹಾಯಕ ಉಗ್ರಾಣಿಕ ಹುದ್ದೆಗೆ) ಪದವಿಯ ಬಗ್ಗೆ ನಿರ್ದಿಷ್ಟವಾದ ಸೂಚನೆಯನ್ನು ನಿಗದಿಪಡಿಸಿರುವುದಿಲ್ಲ. ಆದರೆ ನೇಮಕಾತಿ ಹೊಂದಿದ ನಂತರ ಸಹಾಯಕ ಉಗ್ರಾಣಿಕ ಪಡೆದಿರುವ ಪದವಿಯಲ್ಲಿ ತಾರತಮ್ಯ ಮಾಡಿ ಕೇವಲ ವಾಣಿಜ್ಯ ಮತ್ತು ವಿಜ್ಞಾನ ಪದವೀಧರರಿಗೆ ಮಾತ್ರ ಹೆಚ್ಚುವರಿ ವೇತನ ಮುಂಬಡ್ತಿ ನೀಡಿ ಈ ಸೌಲಭ್ಯದಿಂದ ಕಲಾ ಪದವೀಧರರಿಗೆ ವಂಚಿತಗೊಳಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ?

ಸಮಾನ ಪದವಿಯನ್ನು ಹೊಂದಿ ಈ ಮೇಲೆ ಹೇಳಿದ ಸೌಲಭ್ಯದಿಂದ ವಂಚಿತವಾಗಿರುವ ಕಲಾ ಪದವೀಧರರಿಗೆ ಇದನ್ನು ವಿಸ್ತರಿಸಲು ಮಂಡಳಿಗೆ ಇರುವ ತೊಂದರೆ ಏನು ? ಹಾಗಿದ್ದಲ್ಲಿ ಇದನ್ನು ಈಗಲಾದರೂ ಸರ್ಕಾರ ಸರಿಪಡಿಸಿ ಸದರಿ ಸೌಲಭ್ಯವನ್ನು ಕಲಾ ಪದವೀಧರರಿಗೂ ವಿಸ್ತರಿಸುವುದೇ ? ಅಂದರೆ ಇದನ್ನು ಯಾವಾಗ ಅಮಲಿನಲ್ಲಿ ತರಲಾಗುತ್ತದೆ ? ಈ ಮಂಡಳಿಯಲ್ಲಿ ಗುಮಾಸ್ತ ಸಿಬ್ಬಂದಿ ಅಥವಾ ವಿಜಾನೆ ಶಾಖೆಯಲ್ಲಿ ಕಲಾ ಪದವಿಯನ್ನು ಹೊಂದಿರುವ ಸಿಬ್ಬಂದಿಯು ಪ್ರಸ್ತುತ ನಾಲ್ಕು ವೇತನ ಹೆಚ್ಚುವರಿ ಮುಂಬಡ್ತಿಗಳನ್ನು ಪಡೆಯುತ್ತಿದ್ದು ಈ ಸೌಲಭ್ಯದಿಂದ ಸಮಾನ ಪದವಿ ಹಾಗೂ ಹುದ್ದೆಯನ್ನು ಹೊಂದಿರುವ ಸಹಾಯಕ ಉಗ್ರಾಣಿಕರಿಗೆ ಇದನ್ನು ನೀಡುತ್ತಿಲ್ಲ ಏಕೆ ? ಸರ್ಕಾರ ಇದನ್ನು ಈಗಲಾದರೂ ಸರಿಪಡಿಸಿ ಅಮಲಿನಲ್ಲಿ ತರಲು ಯೋಚಿಸಿದೆಯೆ ? ಅಂದರೆ ಯಾವಾಗ ಇದನ್ನು ಕೃತಿಯಲ್ಲಿ ಜಾರಿಗೊಳಿಸಲಾಗುತ್ತಿದೆ ?

ಶ್ರೀ ಎಂ. ವೀರಪ್ಪ ಮೊಯಿಲಿ :- ಮಾನ್ಯ ಉಪಾಧ್ಯಕ್ಷಿಣಿಯವರೇ, ಮಾನ್ಯ ಸದಸ್ಯರು ಎತ್ತಿದಂತ ವಿಚಾರವನ್ನು ಇಂಧನ ಖಾತೆಯ ಮಂತ್ರಿಗಳ ಗಮನಕ್ಕೆ ತರಲಾಗುವುದು.

ಶ್ರೀ ಬಾಬುರಾವ್ ಚವಾಣ್:- ಇದು ಮಹತ್ವದ ಪ್ರಶ್ನೆ. ಈ ರೀತಿಯಾದರೆ ಪತ್ರ ಬರೆದು ಕೇಳಬಹುದಾಗಿತ್ತು. ನನಗೆ ಉತ್ತರ ಬೇಕಾಗಿದೆ.

ಶ್ರೀ ಎಂ. ವೀರಪ್ಪ ಮೊಯಿಲಿ :- ಉತ್ತರ ಕಳುಹಿಸಿಕೊಡುತ್ತೇವೆ.

ಸಭೆಯ ಮುಂದಿಡಲಾದ ಕಾಗದ ಪತ್ರಗಳು

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಸಚಿವರು):- ಮಾನ್ಯ ಉಪಾಧ್ಯಕ್ಷರೆಯವರೇ, ಮಾನ್ಯ ಮುಖ್ಯ ಮಂತ್ರಿಗಳ ಹೆಸರಿನ ಮುಂದಿರತಕ್ಕ

1984ನೇ ಸಾಲಿನ ಕರ್ನಾಟಕ ಲೋಕಾಯುಕ್ತ ಅಧಿನಿಯಮದ 12(7)ನೇ ಕಲಮಿನ ಮೇರೆಗೆ;

1990-91ನೇ ಸಾಲಿನ ಕರ್ನಾಟಕ ಲೋಕಾಯುಕ್ತದ ಕ್ರೋಢೀಕರಿಸಿದ 5ನೇ ವಾರ್ಷಿಕ ವರದಿಯನ್ನು ಸಭೆಯ ಮುಂದಿಡುತ್ತೇನೆ.

ಮಾನ್ಯ . ಸಾರಿಗೆ, ವಕ್ಫ್ ಮತ್ತು ಹಜ್ ಸಮಿತಿ ಮಂತ್ರಿ ಅವರ ಹೆಸರಿನ ಮುಂದಿರತಕ್ಕ

1950ನೇ ಸಾಲಿನ ರಸ್ತೆ ಸಾರಿಗೆ ಸಂಸ್ಥೆ ಅಧಿನಿಯಮದ 35(3)ನೇ ಕಲಮಿನ ಮೇರೆಗೆ ;

1990-91ನೇ ಸಾಲಿನ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ 30ನೇ ವಾರ್ಷಿಕ ಆಡಳಿತ ವರದಿಯನ್ನು ಸಭೆಯ ಮುಂದಿಡುತ್ತೇನೆ.

3. ಶ್ರೀ ಧರ್ಮಸಿಂಗ್ ನಾರಾಯಣ ಸಿಂಗ್ (ಗೃಹ ಹಾಗೂ ಅಬಕಾರಿ ಮಂತ್ರಿ)

ಮಾನ್ಯ ಉಪಾಧ್ಯಕ್ಷರೆಯವರೆ.

1963ನೇ ಸಾಲಿನ ಕರ್ನಾಟಕ ಪೋಲೀಸ್ ಅಧಿನಿಯಮದ 163(4)ನೇ ಕಲಮಿನ ಮೇರೆಗೆ :

ಅಧಿಸೂಚನೆ ಕ್ರಮಾಂಕ ಹೆಚ್ಡಿ 74 ಪಿಇಟಿ 91 ದಿನಾಂಕ 19ನೇ ಡಿಸೆಂಬರ್ 1991.

1991ನೇ ಸಾಲಿನ ಕರ್ನಾಟಕ ಮೀಸಲು ಪೋಲೀಸ್ (ನೇಮಕಾತಿ ಹಾಗೂ ಸೇವಾ ಷರತ್ತುಗಳು) ತಿದ್ದುಪಡಿ ನಿಯಮಗಳನ್ನು ಸಭೆಯ ಮುಂದಿಡುತ್ತೇನೆ.

1964ನೇ ಸಾಲಿನ ಕರ್ನಾಟಕ ಸಿನಿಮಾ (ನಿಯಂತ್ರಣ) ಅಧಿನಿಯಮದ 22ನೇ ಕಲಮಿನ ಮೇರೆಗೆ :

ಅ)ಆದೇಶ ಸಂಖ್ಯೆ :ಹೆಚ್ಡಿ 5 ಸಿಎನ್ಎ 92 ದಿನಾಂಕ 24-2-1992

ಹರಿಹರ ಪಾಲಿಫೈಬರ್ಸ್ ಆಡಿಟೋರಿಯಂನಲ್ಲಿ ನೌಕರರ ಸಲುವಾಗಿ 35 ಎಂ ಎಂ ಚಲನಚಿತ್ರ ಪ್ರದರ್ಶಿಸಲು ಕರ್ನಾಟಕ ಸಿನಿಮಾ (ನಿಯಂತ್ರಣ) ಅಧಿನಿಯಮದ 4ನೇ ಕಲಮಿನಿಂದ ವಿನಾಯಿತಿ ನೀಡುವ ಬಗ್ಗೆ;

ಆ)ಅಧಿಸೂಚನೆ ಸಂಖ್ಯೆ : ಹೆಚ್ಡಿ 4 ಸಿಎನ್ಎ 92 ದಿನಾಂಕ 15-2-1992

ಬಳ್ಳಾರಿ ಜಿಲ್ಲೆಯ ಹಗರಿಬೊಮ್ಮನಹಳ್ಳಿ ತಾಲ್ಲೂಕಿನ ತಂಬ್ರಹಳ್ಳಿಯ ಶಿವರಾಮಕೃಷ್ಣ ಸಂಚಾರಿ ಚಿತ್ರಮಂದಿರವನ್ನು ತಾತ್ಕಾಲಿಕ ಚಿತ್ರಮಂದಿರವನ್ನಾಗಿ ಪರಿವರ್ತಿಸಲು ಅರ್ಜಿ ಸಲ್ಲಿಸಲು ದಿನಾಂಕ 18-11-1991ರವರೆಗೆ ಆಗಿರುವ ವಿಳಂಬವನ್ನು ಮನ್ನಾ ಮಾಡುವ ಬಗ್ಗೆ ;

ಇ)ಅಧಿಸೂಚನೆ ಸಂಖ್ಯೆ :ಹೆಚ್ಡಿ: 26 ಸಿಎನ್ಎ: 92 ದಿನಾಂಕ 5-3-1992.

ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯದಲ್ಲಿರುವ ಪ್ರಕಾಶ್ ಸಂಚಾರಿ ಚಿತ್ರಮಂದಿರವನ್ನು ಅರೆ ಕಾಯಂ ಆಗಿ ಪರಿವರ್ತಿಸುವ ಬಗ್ಗೆ ನಿರಾಕ್ಷೇಪಣಾ ಪತ್ರದ ಅವಧಿಯನ್ನು ವಿಸ್ತರಿಸುವ ಬಗ್ಗೆ ;

ಈ)ಅಧಿಸೂಚನೆ ಸಂಖ್ಯೆ : ಹೆಚ್ಡಿ 315 ಸಿಎನ್ಎ 91 ದಿನಾಂಕ 20-1-1992.

ಬಳ್ಳಾರಿ ಜಿಲ್ಲೆಯ ಸಂಡೂರು ತಾಲ್ಲೂಕು ಹೊಸದರೋಜಿಯ ಶ್ರೀ ರೇಣುಕಾಸಿದ್ಧೇಶ್ವರ ಸಂಚಾರಿ ಚಿತ್ರಮಂದಿರದ ಮಾಲೀಕರು ತಮ್ಮ ಸಂಚಾರಿ ಚಿತ್ರಮಂದಿರವನ್ನು ತಾತ್ಕಾಲಿಕ ಚಿತ್ರಮಂದಿರವನ್ನಾಗಿ ಪರಿವರ್ತಿಸಲು ಅರ್ಜಿ ಸಲ್ಲಿಸುವಲ್ಲಿ ಆಗಿರುವ ವಿಳಂಬವನ್ನು ಮನ್ನಾ ಮಾಡುವ ಬಗ್ಗೆ : ಹಾಗೂ

ಉ)ಅಧಿಸೂಚನೆ ಸಂಖ್ಯೆ :ಹೆಚ್ಡಿ 153 ಸಿಎನ್ಎ 90 ದಿನಾಂಕ 14-5-1991